## ಪರ್ಯಾಯ ಶೈಕ್ಷಣಿಕ ಯೋಜನೆ 2021–22

**ತರಗತಿ:6** **ಅಕ್ಟೋಬರ್ ಮಾಹೆ** **ಪ್ರಥಮ ಭಾಷೆ ಕನ್ನಡ**

**ಪದ್ಯ ಭಾಗ : ನೀ ಹೋದ ಮರುದಿನ**

| ಕ್ರ.ಸಂ | ತಿಂಗಳು/ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1 | ಅಕ್ಟೋಬರ್ 1ನೇ ವಾರ | *ಕ್ಷೇತ್ರ : ಬರೆಯುವುದು<br>ಆಲಿಸಿದ ಮತ್ತು ಓದಿದ ವಿಷಯಗಳನ್ನು ಸೂಕ್ತ ಲೇಖನ ಚಿಹ್ನೆಗಳನ್ನು ಬಳಸಿ ಅರ್ಥಪೂರ್ಣ ವಾಕ್ಯಗಳಲ್ಲಿ ಬರೆಯುವುದು<br><br>ಪದ್ಯ ಕಲಿಕೆ | ಚಟುವಟಿಕೆ 1:<br>* ಡಾ.ಬಿ.ಆರ್ ಅಂಬೇಡ್ಕರ್ ರವರ ಭಾವಚಿತ್ರ ತೋರಿಸಿ ಗುರುತಿಸಲು ಸೂಚಿಸುವುದು<br>ಚಟುವಟಿಕೆ 2:<br>* ಶಾಲೆಯಲ್ಲಿ ಆಚರಿಸುವ ಡಾ.ಬಿ.ಆರ್ ಅಂಬೇಡ್ಕರ್ ಜಯಂತಿ ಕುರಿತು ಮಕ್ಕಳಿಂದ ಹೇಳಿಸುವುದು.<br>ಚಟುವಟಿಕೆ 3:<br>* ಡಾ.ಬಿ.ಆರ್ ಅಂಬೇಡ್ಕರ್ ರವರ ಬಗ್ಗೆ ಮಕ್ಕಳಿಂದ ಮಾಹಿತಿ ಹೇಳಿಸುವುದು<br>– ಸ್ವರಭಾರ ಏರಿಳಿತದೊಂದಿಗೆ ಪದ್ಯವನ್ನು ರಾಗವಾಗಿ ಹೇಳಿಕೊಡುವುದು ಮತ್ತು ಮಕ್ಕಳಿಂದ ಹಾಡಿಸುವುದು<br>– ಧ್ವನಿ ಸುರುಳಿ ಬಳಸಿ ಪದ್ಯವನ್ನು ಕೇಳಿಸುವುದು<br>ಲಿಂಕ್ ಈ ರೀತಿ ಇದೆ:👇<br>https://youtu.be/Bn15ZIW8RS0<br><br>– ಪ್ರಸ್ತುತ ಪದ್ಯದ ಸಾರಾಂಶವನ್ನು ಅರ್ಥೈಸುವುದು | ಮಕ್ಕಳಿಂದ ಪದ್ಯವನ್ನು ಹಾಡಿಸುವುದು<br><br>ಪದ್ಯವನ್ನು ಬರೆಸುವುದು<br><br>ಪದ್ಯದ ಸಾರಾಂಶ ಹೇಳಿಸುವುದು |

| ಕ್ರ.ಸಂ | ತಿಂಗಳು/ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 2 | ಅಕ್ಟೋಬರ್<br>2ನೇ ವಾರ | * ಲೇಖನ ಚಿಹ್ನೆಗಳನ್ನು ಪರಿಚಯಿಸುವುದು ಮತ್ತು ಬರೆಸುವುದು<br><br>* ಹೊಸ ಪದಗಳ ಪರಿಚಯ ಪದಗಳ ಅರ್ಥ ತಿಳಿಯುವರು<br><br>* ಗ್ರಾಮ್ಯ– ಗ್ರಾಂಥಿಕ ಪದಗಳನ್ನು ತಿಳಿಯುವರು | – ಪಠ್ಯದಲ್ಲಿ ಬರುವ ಲೇಖನ ಚಿಹ್ನೆಗಳನ್ನು ತೋರಿಸುತ್ತಾ ಮಕ್ಕಳಿಗೆ ಉದಾಹರಣೆಯೊಂದಿಗೆ ಪರಿಚಯಿಸುವುದು<br><br>ಕೊತ್ತಿ = ಬೆಕ್ಕು<br>ಬರಡು = ಸತ್ವಹೀನ ( ಸತ್ವ ರಹಿತ)<br>ಟಾರ = ಡಾಂಬರು<br><br>ಗ್ರಾಮ್ಯ ಪದಗಳಿಗೆ ಗ್ರಾಂಥಿಕ ರೂಪ ತಿಳಿಸುವುದು<br>ಮೊದಲಂಗೆ – ಮೊದಲಿನಂತೆ<br>ಹಾಗ್ಯಾದೋ – ಆಗಿದೆ<br>ನಿನ್ನಂಗ – ನಿನ್ನಂತೆ<br>ನಮಗ – ನಮಗೆ ಸುಮ್ಮ – ಸುಮ್ಮನೆ<br>ತಮ್ಮಂಗೆ – ತಮ್ಮಂತೆ<br>ಹೋಗ್ಬಾರೊ – ಹೋಗಿ ಬರುವ<br>ಹಾಸ್ಯಾವೋ – ಹಾಸಿವೆ<br>ಹಗಲಾಗ – ಹಗಲಿನಲ್ಲಿ ಇಂಗೈತೆ – ಹೀಗಿದೆ<br>ಗ್ವಾಡ್ಯಾಗ – ಗೋಡೆಯ ಮೇಲೆ<br>ಕುಂತಾರ – ಕುಳಿತಿದ್ದಾರೆ ಈಗ್ಲಾದ್ರು – ಈಗಲಾದರೂ | ಕೆಳಗಿನ ಲೇಖನ ಚಿಹ್ನೆಗಳ ಹೆಸರುಗಳನ್ನು ಗುರುತಿಸಿ ಬರೆಯಿರಿ<br>. , ' ' " " ? !<br><br>ಪಠ್ಯದ ಕೊನೆಯಲ್ಲಿರುವ ಅಭ್ಯಾಸ ಚಟುವಟಿಕೆ ಪ್ರಶ್ನೆಗಳಿಗೆ ಉತ್ತರ ಹೇಳಿಸಿ ಬರೆಸುವುದು<br><br>ಅಭ್ಯಾಸದ ಹಾಳೆ |

| ಕ್ರ.ಸಂ | ತಿಂಗಳು/ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 3 | ಅಕ್ಟೋಬರ್<br>3ನೇ ವಾರ | * ಕವಿ– ಕೃತಿ ಪರಿಚಯ<br>ಡಾ. ಚೆನ್ನಣ್ಣ ವಾಲಿಕಾರ | ಜನನ : 1943 ನಿಧನ : 25.11.2019<br>ಸ್ಥಳ : ಕಲಬುರ್ಗಿ ಜಿಲ್ಲೆ, ಚಿತ್ತಾಪುರ ತಾ॥<br>ಶಂಕರವಾಡಿ ಗ್ರಾಮ<br>ತಂದೆ : ಧಳಪ್ಪ ವಾಲಿಕಾರ<br>ತಾಯಿ : ಸಾಬವ್ವ<br>**ಬಂಡಾಯದ ಹಿನ್ನಲೆಯಲ್ಲಿ ರಚಿಸಿದ ಕವನ ಸಂಕಲನಗಳು:**<br>– ಮರದ ನೀರಿನ ಗಾಳಿ<br>– ಪ್ಯಾಂಥರ್ಸ್ ಪದ್ಯಗಳು<br>– ಧಿಕ್ಕಾರದ ಹಾಡುಗಳು<br>**ಕಥಾ ಸಂಕಲನಗಳು:**<br>– ಕಪ್ಪು ಕತೆಗಳು<br>– ಹೆಪ್ಪು ಗಟ್ಟಿದ ಸಮುದ್ರ<br>– ಕುತ್ತದಲಿ ಕುದ್ದವರ ಕತೆಗಳು<br>**ಮಹಾಕಾವ್ಯಗಳು:**<br>– 'ವ್ಯೋಮಾವ್ಯೋಮ',<br>– ಸುನೀತಂಗಳ ಸುಖಾವ್ಯಾಮೃತ<br>**ನಾಟಕಗಳು:**<br>– ಟೊಂಕದ ಕೆಳಗಿನ ಜನ<br>– ನರಭಕ್ಷಕ ರಾಜನ ಕಥೆ<br>– ತಲೆಹಾಕುವವರು | ಯೋಜನೆ 1<br><br><br><br><br><br><br><br><br><br><br>ಯೋಜನೆ 2 |

| ಕ್ರ.ಸಂ | ತಿಂಗಳು/ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | | | **ಪ್ರಶಸ್ತಿಗಳು:**<br>– ಕರ್ನಾಟಕ ಜಾನಪದ ಅಕಾಡೆಮಿ ಗೌರವ<br>– ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ<br>– ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ<br>– ಮಂಗಳೂರು ಸಾಹಿತ್ಯ ಬಳಗ ಪ್ರಶಸ್ತಿ<br>– ಗುಲ್ಬರ್ಗ ವಿ.ವಿ.ದ ರಾಜ್ಯೋತ್ಸವ ಪ್ರಶಸ್ತಿ<br><br>**ವಿಶೇಷತೆ:**<br>'ವ್ಯೋಮಾವ್ಯೋಮ' – 1030 ಪುಟಗಳ ಬೃಹತ್ ಪ್ರಾಯೋಗಿಕ ಕಾವ್ಯ. ಮೊದಲ ಪುಟದಿಂದ ಕೊನೆಯ ಪುಟದವರೆಗೂ ಎಲ್ಲೂ ಪೂರ್ಣವಿರಾಮ, ಅಲ್ಪವಿರಾಮ, ಪ್ರಶ್ನಾರ್ಥಕ ಇತ್ಯಾದಿ ಲೇಖನ ಚಿಹ್ನೆಗಳನ್ನು ಬಳಸಿರುವುದಿಲ್ಲ. | ಯೋಜನೆ 3 |

ಯೋಜನೆಗಳು :

1. ಸಣ್ಣ ಕಥೆಯನ್ನು ಸಂಗ್ರಹಿಸಿ ಬರೆದು ಆ ಕಥೆಯಲ್ಲಿ ಬರಬಹುದಾದ ಎಲ್ಲಾ ಲೇಖನ ಚಿಹ್ನೆಗಳನ್ನು ಬೇರೆ ಬಣ್ಣದಿಂದ ಗುರುತಿಸಿ ಬರೆಯಿರಿ.
2. ಡಾ.ಚೆನ್ನಣ್ಣ ವಾಲಿಕಾರ ಹಾಗೂ ಡಾ.ಬಿ.ಆರ್ ಅಂಬೇಡ್ಕರ್ ರವರ ಭಾವಚಿತ್ರಗಳನ್ನು ಸಂಗ್ರಹಿಸಿ ಅವರ ಬಗ್ಗೆ ಮಾಹಿತಿಗಳನ್ನು ಹುಡುಕಿ ಬರೆಯಿರಿ.
3. ಕನ್ನಡ ಕಾಪಿ ಬರವಣಿಗೆ ಹಾಳೆಯಲ್ಲಿ 'ನೀ ಹೋದ ಮರು ದಿನ' ಪದ್ಯವನ್ನು ಸ್ಪಷ್ಟವಾಗಿ ಬರೆಯಿರಿ.

ಅಭ್ಯಾಸದ ಹಾಳೆ – 1

ತರಗತಿ : 6 ಪದ್ಯ : ನೀ ಹೋದ ಮರುದಿನ

---

*** ಕೆಳಗಿನ ಪಠ್ಯವನ್ನು ಗಮನಿಸಿ ಕಾಣಬಹುದಾದ ಲೇಖನ ಚಿಹ್ನೆಗಳಿಗೆ ಗೆರೆ ಎಳೆದು ಗುರುತಿಸಿ ಪಠ್ಯದ ಕೆಳಗೆ ಬರೆಯಿರಿ**

ಬಾಗಿಲು ನೂಕಿ ಒಳಗೆ ಹೋದನು. ಆಶ್ಚರ್ಯ! ಅಲ್ಲಿ ಹುಡುಗಿ ಇರಲಿಲ್ಲ, ಚಿನ್ನ ಬೆಳ್ಳಿ ದಾರಗಳನ್ನು ಕೂಡಿಸಿ ಕೊಕ್ಕರೆಯೊಂದು ಪೀತಾಂಬರವನ್ನು ನೇಯುತ್ತಿತ್ತು. ಅದು ತಾನು ಕಾಪಾಡಿದ ಹಕ್ಕಿ ಎಂಬುದರಲ್ಲಿ ಹರಿಗೆ ಸಂಶಯವಿರಲಿಲ್ಲ. ಕೊಕ್ಕರೆ "ನಾನು ಬೇಡ ಎಂದು ಹೇಳಿದರು ನೀನ್ಯಾಕೆ ಒಳಗೆ ಬಂದೆ? ಈಗ ಎಲ್ಲಾ ಹಾಳಾಯಿತಲ್ಲಾ!" ಎಂದಿತು. ಆಗ ಹರಿಯು ತಲೆ ತಗ್ಗಿಸಿ ನಿಂತನು.

*** ಲೇಖನ ಚಿಹ್ನೆಗಳು:**

| | | | | |
|---|---|---|---|---|
| | | | | |

*** ಕೆಳಗಿನ ಪದಗಳನ್ನು ಬಳಸಿ ವಾಕ್ಯ ರಚಿಸಿ ಬರೆಯಿರಿ:**

– ಸ್ವಾತಂತ್ರ್ಯ : ______________________________

______________________________

– ಸಂಭ್ರಮ : ______________________________

______________________________

*** ಕೆಳಗಿನ ಲೇಖನ ಚಿಹ್ನೆಗಳ ಹೆಸರನ್ನು ಬರೆಯಿರಿ:**

| | | | |
|---|---|---|---|
| . | ____________ | ? | ____________ |
| " " | ____________ | ' ' | ____________ |
| ! | ____________ | , | ____________ |

ಅಭ್ಯಾಸದ ಹಾಳೆ – 2

ತರಗತಿ : 6 ಪದ್ಯ : ನೀ ಹೋದ ಮರುದಿನ

*** ಕೆಳಗಿನ ಪದಗಳ ಗ್ರಾಂಥಿಕ ರೂಪ ಬರೆಯಿರಿ :**

1. ಮೊದಲಂಗೆ – ____________________
2. ಹಗಲಾಗ – ____________________
3. ನಿನ್ನಂಗ – ____________________
4. ಗ್ವಾಡ್ಯಾಗ – ____________________
5. ತಮ್ಮಂಗೆ – ____________________
6. ಕುಂತಾರ – ____________________
7. ಹೋಗ್ಬಾರೊ – ____________________
8. ಸುಮ್ಮ – ____________________
9. ಹಾಸ್ಯಾವೋ – ____________________
10. ಇಂಗೈತೆ – ____________________

*** ಕೆಳಗಿನ ವಾಕ್ಯಗಳಿಗೆ ಸೂಕ್ತ ಲೇಖನ ಚಿಹ್ನೆ ಬರೆಯಿರಿ:**

1. ಕಾಡಿನಲ್ಲಿ ಅನೇಕ ಕ್ರೂರ ಪ್ರಾಣಿಗಳು ವಾಸಿಸುತ್ತಿದ್ದವು
2. ನೀನೇಕೆ ಒಳಗೆ ಬಂದೆ
3. ನಾನು ನೀನು ಕಾಪಾಡಿದ ಕೊಕ್ಕರೆಯೇ
4. ಶಿಕ್ಷಕರು ನೀವೆಲ್ಲರೂ ಯೋಜನೆ ತಯಾರಿಸಿ ಎಂದು ಹೇಳಿದರು
5. ಮರದ ನೀರಿನ ಗಾಳಿ ಪ್ಯಾಂಥರ್ಸ್ ಪದ್ಯಗಳು ದಿಕ್ಕಾರದ ಹಾಡುಗಳು ಇವು ಡಾ.ಚೆನ್ನಣ್ಣ ವಾಲಿಕಾರರು ರಚಿಸಿದ ಕವನಸಂಕಲನಗಳು
6. ನಿನ್ನ ಹೆಸರೇನು ನೀನು ಎಷ್ಟನೇ ತರಗತಿಯಲ್ಲಿ ಓದುತ್ತಿರುವೆ
7. ಸ್ವಾಮಿ ನನಗೆ ಅದೃಷ್ಟವಿಲ್ಲ ಈಗಲೂ ನನ್ನ ಹೃದಯ ಅವನಿಗಾಗಿ ಮಿಡಿಯುತ್ತಿದೆ ಎಂದು ಮಡಿವಾಳ್ತಿ ಅತ್ತಳು
8. ಆಹಾ ಈ ಹೂವು ತುಂಬಾ ಸುಂದರವಾಗಿದೆ
9. ರವಿ ರಮೇಶ ಫಾತಿಮಾ ಸ್ನೇಹ ಮತ್ತು ರಮ್ಯ ತೋಟಗಾರಿಕೆ ಕೆಲಸವನ್ನು ಮಾಡಿದರು
10. ಅಬ್ಬಾ ಎಂಥ ಸೊಗಸಾದ ದೃಶ್ಯ

# ಅಭ್ಯಾಸದ ಹಾಳೆ – 3

ತರಗತಿ : 6 ಪದ್ಯ : ನೀ ಹೋದ ಮರುದಿನ

---

*** ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿ:**

1. 'ನೀ ಹೋದ ಮರುದಿನ' ಪದ್ಯವನ್ನು ಬರೆದ ಕವಿ ______________________

2. 'ನೀ ಹೋದ ಮರುದಿನ' ಕವಿತೆಯನ್ನು ______________________ ದಿಂದ ಆರಿಸಿಕೊಳ್ಳಲಾಗಿದೆ.

3. 'ಕೊತ್ತಿ' ಪದದ ಅರ್ಥ ____________________

4. 'ಸಂಭ್ರಮ' ಪದದ ಅರ್ಥ __________________

*** ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ:**

1. ಯಾರು ಹೋದ ಮೇಲೆ ನಮ್ಮ ಬದುಕು ಮೊದಲಿನಂತೆ ಆಗಿದೆ ಎಂದು ಕವಿ ಹೇಳಿದ್ದಾರೆ?

2. ಕವಿ ಯಾವುದು ಪ್ರತಿ ನಿತ್ಯ ತಪ್ಪಿಲ್ಲ ನಮಗೆ ಎಂದಿದ್ದಾರೆ?

3. ಕವಿ ಏನನ್ನು ಕಳೆದುಕೊಂಡ ಬರಡು ಗಿಡ ನಾವು ಎಂದಿದ್ದಾರೆ?

4. ತಾಳಿ ತಾಳಿ ಒಮ್ಮೆ ಏನಾಗಿ ಕುಟುಕುವನು?

*** ಸುಮೇರು ಭಾಗ–1 ಪುಟ ಸಂಖ್ಯೆ 59 ರಲ್ಲಿ ಇರುವ ಕಥೆಯನ್ನು ಪೂರ್ಣಗೊಳಿಸಿ**